# <u>ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಪಾಂಡವಪುರ</u>

ದಿನಾಂಕಃ **22.09.2025**

<u>ಸಿ.ಸಿ.ಸಂ.**124/2025**</u>

ಫಿರ್ಯಾದಿಃ- ಪಾಂಡವಪುರ ಠಾಣಾ ಪೊಲೀಸರು

ಃ ವಿರುದ್ಧ ಃ

ಆರೋಪಿ ಃ ಸಾಗರ್ ಬಿನ್ ಜಗದೀಶ್.ಪಿ.ಎಸ್,
ಸುಮಾರು 25 ವರ್ಷ,
ವಾಸಃ ಹಿರೋಡೆ ಬೀದಿ, ಪಾಂಡವಪುರ ಟೌನ್,
ಮಂಡ್ಯ.

## <u>ದೋಷಾರೋಪಣಾ</u>

**ಶ್ರೀಮತಿ. ಪಾರ್ವತಮ್ಮ.ಬಿ, ಬಿ.ಎ, ಎಲ್.ಎಲ್.ಎಂ, ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಪಾಂಡವಪುರ ಆದ ನಾನು ಆರೋಪಿಯಾದ ನಿಮ್ಮ ಮೇಲೆ ಈ ಕೆಳಕಂಡಂತೆ ದೋಷಾರೋಪಣೆ ಹೊರಿಸುತ್ತಿದ್ದೇನೆ.**

ಆರೋಪಿಯಾದ ನೀವು ಅಪರಾಧವನ್ನು ಎಸಗುವ ಉದ್ದೇಶದಿಂದ, ಪಾಂಡವಪುರ ಪೊಲೀಸ್ ಠಾಣಾ ಸರಹದ್ದಿಗೆ ಸೇರಿದ, ದಿನಾಂಕ: 28-12-2024 ರಂದು ಬೆಳಿಗ್ಗೆ 9-00 ಗಂಟೆ ಸಮಯದಲ್ಲಿ ಪಾಂಡವಪುರ ಪೊಲೀಸ್ ಠಾಣಾ ಸರಹದ್ದಿಗೆ ಸೇರಿದ ಕೆರೆಬಯಲಿನಲ್ಲಿ ಇರುವ ಚಾಸಾ-1 ಲಕ್ಷ್ಮಿನಾರಾಯಣ ರವರ ಬಾಬ್ತು ಸರ್ವೆ ನಂಬರ್.103 ರ ಜಮೀನಿನಲ್ಲಿ ಚಾಸಾ-2 ರಾಮಣ್ಣ ಮತ್ತು ಚಾಸಾ-3 ಮಹಾದೇವ ರವರು ಕೆಲಸ ಮಾಡುತ್ತಿದ್ದಾಗ, ಆರೋಪಿಯಾದ ನೀವು ಚಾಸಾ-1 ರವರ ಜಮೀನಿಗೆ ಅತಿಕ್ರಮ ಪ್ರವೇಶ ಮಾಡಿರುತ್ತೀರಿ, ಆ ಕಾರಣ ಆರೋಪಿಯಾದ ನೀವು ಭಾರತೀಯ ನ್ಯಾಯ ಸಂಹಿತೆ ಕಲಂ.329(3) ರ ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ನನ್ನ ಸಂಜ್ಞೆ ಮತ್ತು ಪರಿಮಿತಿಯೊಳಗೆ ಎಸಗಿರುತ್ತೀರಿ.

<u>ಎರಡನೆಯದಾಗಿಃ</u>- ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ, ಆರೋಪಿಯಾದ ನೀವು ಅಪರಾಧವನ್ನು ಎಸಗುವ ಉದ್ದೇಶದಿಂದ, ಜಮೀನಿನಲ್ಲಿ ಕೆಲಸ ಮಾಡುತ್ತಿದ್ದ ಚಾಸಾ-2 ಮತ್ತು 3 ರವರ ಜೊತೆ ಜಗಳ ತೆಗೆದು ನೀವು ಈ ಜಮೀನಿನಲ್ಲಿ ಕೆಲಸ ಮಾಡಬೇಡಿ ಎಂದು ಕುಪಿತರಾಗಿ ಸಾರ್ವಜನಿಕ ಶಾಂತಿಭಂಗವನ್ನುಂಟು ಮಾಡಲಿ ಎಂಬ ಕಾರಣದಿಂದ ಬೋಳಿಮಕ್ಕಳ, ಸೂಳೆಮಕ್ಕಳ ಎಂದು ಅವಾಚ್ಯ ಶಬ್ದಗಳಿಂದ ಬೈದಿರುತ್ತೀರಿ, ಆ ಕಾರಣ ಆರೋಪಿಯಾದ ನೀವು ಭಾರತೀಯ

ನ್ಯಾಯ ಸಂಹಿತೆ ಕಲಂ.352 ರ ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ನನ್ನ ಸಂಜ್ಞೆ ಮತ್ತು ಪರಿಮಿತಿಯೊಳಗೆ ಎಸಗಿರುತ್ತೀರಿ.

<u>ಮೂರನೆಯದಾಗಿ</u>:- ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ, ಆರೋಪಿಯಾದ ನೀವು ಅಪರಾಧವನ್ನು ಎಸಗುವ ಉದ್ದೇಶದಿಂದ, ನೀವು ನಿಮ್ಮ ಸ್ವಇಚ್ಚೆಯಿಂದ ಬಲಗೈಯಿಂದ ಚಾಸಾ-2 ರವರ ಕುತ್ತಿಗೆ ಮೇಲೆ ಹೊಡೆದು ಹಾಗೂ ಚಾಸಾ-3 ರವರ ಎಡಕಪಾಲದ ಮೇಲೆ ಕೈಯಿಂದ ಹೊಡೆದು, ಚಾಸಾ-2 ಮತ್ತು 3 ಇಬ್ಬರಿಗೂ ಕಾಲಿನಿಂದ ಒದ್ದು ಸಾಮಾನ್ಯ ಸ್ವರೂಪದ ಗಾಯವುಂಟು ಮಾಡಿರುತ್ತೀರಿ, ಆ ಕಾರಣ ಆರೋಪಿಯಾದ ನೀವು ಭಾರತೀಯ ನ್ಯಾಯ ಸಂಹಿತೆ ಕಲಂ.115(2) ರ ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ನನ್ನ ಸಂಜ್ಞೆ ಮತ್ತು ಪರಿಮಿತಿಯೊಳಗೆ ಎಸಗಿರುತ್ತೀರಿ.

<u>ನಾಲ್ಕನೆಯದಾಗಿ</u>:- ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ, ಆರೋಪಿಯಾದ ನೀವು ಅಪರಾಧವನ್ನು ಎಸಗುವ ಉದ್ದೇಶದಿಂದ, ನಂತರ ಇದನ್ನು ಕೇಳಲು ಜಮೀನಿನ ಬಳಿ ಬಂದ ಚಾಸಾ-1 ರವರ ಜೊತೆ ಆರೋಪಿ ಜಗಳ ತೆಗೆದು ಚಾಸಾ-1 ರವರು ಜಮೀನಿನಲ್ಲಿ ಮುಂದೆ ಹೋಗದಂತೆ ಹಾಗೂ ಜಮೀನಿನಲ್ಲಿ ವ್ಯವಸಾಯ ಮಾಡದಂತೆ ತಡೆದು ಅಡ್ಡಗಟ್ಟಿರುತ್ತೀರಿ, ಆ ಕಾರಣ ಆರೋಪಿಯಾದ ನೀವು ಭಾರತೀಯ ನ್ಯಾಯ ಸಂಹಿತೆ ಕಲಂ.126(2) ರ ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ನನ್ನ ಸಂಜ್ಞೆ ಮತ್ತು ಪರಿಮಿತಿಯೊಳಗೆ ಎಸಗಿರುತ್ತೀರಿ.

<u>ಕೊನೆಯದಾಗಿ</u>:- ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ, ಆರೋಪಿಯಾದ ನೀವು ಅಪರಾಧವನ್ನು ಎಸಗುವ ಉದ್ದೇಶದಿಂದ, ಈ ಜಮೀನಿನಿಂದ ಹೊರಟು ಹೋಗಿ, ಇಲ್ಲದಿದ್ದರೆ ಪಿಕಾಸಿಯಿಂದ ಹೊಡೆದು ಸಾಯಿಸುವುದಾಗಿ ಕೊಲೆ ಬೆದರಿಕೆ ಹಾಕಿದ್ದು, ಇನ್ನೊಂದು ಬಾರಿ ಜಮೀನಿನ ಬಳಿ ಬಂದರೆ ಹೊಡೆದು ಹಾಕುತ್ತೇನೆಂದು ಕೊಲೆ ಬೆದರಿಕೆ ಹಾಕಿರುತ್ತೀರಿ, ಆ ಕಾರಣ ಆರೋಪಿಯಾದ ನೀವು ಭಾರತೀಯ ನ್ಯಾಯ ಸಂಹಿತೆ ಕಲಂ.351(2), 351(3) ರ ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ನನ್ನ ಸಂಜ್ಞೆ ಮತ್ತು ಪರಿಮಿತಿಯೊಳಗೆ ಎಸಗಿರುತ್ತೀರಿ.

**ಸದರಿ ಮೇಲ್ಕಂಡ ಆರೋಪಗಳಿಗೆ ಆರೋಪಿಯಾದ ನೀವು ಗುರಿಯಾಗತಕ್ಕದ್ದು ಎಂದು ನಾನು ಈ ಮೂಲಕ ನಿರ್ದೇಶಿಸಿರುತ್ತೇನೆ.**

**(ಪಾರ್ವತಮ್ಮ.ಬಿ.)**
**ಪ್ರದಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ**
**ನ್ಯಾಯಾಲಯ, ಪಾಂಡವಪುರ.**

**ಆರೋಪಿ ಸಹಿಃ**